Prepp

Practice, Learn and Achieve Your Goal with Prepp

# UGC NET Exam

Kannada

Simplifying

**Government Exams**

SSC CHSL | IAS EXAM | RRB NTPC | NTSE | CDS

SSC CGL | CBSE UGC NET | IBPS PO | NDA

SBI PO | IBPS CLERK | AFCAT | SSC JE | CTET

CSIR UGC NET | CAPF | IBPS RRB

www.prepp.in

# PAPER-II
# KANNADA

**Signature and Name of Invigilator**

1. (Signature) ____________________________
   (Name) ____________________________
2. (Signature) ____________________________
   (Name) ____________________________

| J | 2 | 1 | 1 | 3 |
|---|---|---|---|---|

OMR Sheet No. : ...............................................
(To be filled by the Candidate)

Roll No. | | | | | | | | |
(In figures as per admission card)

Roll No.____________________________
(In words)

Time : **1 $^{1}/_{4}$** hours] [Maximum Marks : **100**

Number of Pages in this Booklet : **12** Number of Questions in this Booklet : **50**

## Instructions for the Candidates

1. Write your roll number in the space provided on the top of this page.
2. This paper consists of fifty multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal / polythene bag on the booklet. Do not accept a booklet without sticker-seal / without polythene bag and do not accept an open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
   (iii) After this verification is over, the OMR Sheet Number should be entered on this Test Booklet.
4. Each item has four alternative responses marked (A), (B), (C) and (D). You have to darken the circle as indicated below on the correct response against each item.
   **Example :** Ⓐ Ⓑ ● Ⓓ
   where (C) is the correct response.
5. Your responses to the items are to be indicated in the **OMR Sheet given inside the Paper I Booklet only.** If you mark at any place other than in the circle in the OMR Sheet, it will not be evaluated.
6. Read instructions given inside carefully.
7. Rough Work is to be done in the end of this booklet.
8. If you write your Name, Roll Number, Phone Number or put any mark on any part of the OMR Sheet, except for the space allotted for the relevant entries, which may disclose your identity, or use abusive language or employ any other unfair means, you will render yourself liable to disqualification.
9. You have to return the original OMR Sheet to the invigilators at the end of the examination compulsorily and must not carry it with you outside the Examination Hall. You are however, allowed to carry duplicate copy of OMR Sheet on conclusion of examination.
10. **Use only Blue/Black Ball point pen.**
11. **Use of any calculator or log table etc., is prohibited.**
12. **There is no negative marks for incorrect answers.**

## परीक्षार्थियों के लिए निर्देश

1. पहले पृष्ठ के ऊपर नियत स्थान पर अपना रोल नम्बर लिखिए ।
2. इस प्रश्न-पत्र में पचास बहुविकल्पीय प्रश्न हैं ।
3. परीक्षा प्रारम्भ होने पर, प्रश्न-पुस्तिका आपको दे दी जायेगी । पहले पाँच मिनट आपको प्रश्न-पुस्तिका खोलने तथा उसकी निम्नलिखित जाँच के लिए दिये जायेंगे, जिसकी जाँच आपको अवश्य करनी है :
   (i) प्रश्न-पुस्तिका खोलने के लिए पुस्तिका पर लगी कागज की सील / पोलिथीन बैग को फाड़ लें । खुली हुई या बिना स्टीकर-सील / बिना पोलिथीन बैग की पुस्तिका स्वीकार न करें ।
   (ii) **कवर पृष्ठ पर छपे निर्देशानुसार प्रश्न-पुस्तिका के पृष्ठ तथा प्रश्नों की संख्या को अच्छी तरह चैक कर लें कि ये पूरे हैं । दोषपूर्ण पुस्तिका जिनमें पृष्ठ/प्रश्न कम हों या दुबारा आ गये हों या सीरियल में न हों अर्थात् किसी भी प्रकार की त्रुटिपूर्ण पुस्तिका स्वीकार न करें तथा उसी समय उसे लौटाकर उसके स्थान पर दूसरी सही प्रश्न-पुस्तिका ले लें । इसके लिए आपको पाँच मिनट दिये जायेंगे । उसके बाद न तो आपकी प्रश्न-पुस्तिका वापस ली जायेगी और न ही आपको अतिरिक्त समय दिया जायेगा ।**
   (iii) इस जाँच के बाद OMR पत्रक की क्रम संख्या इस प्रश्न-पुस्तिका पर अंकित कर दें ।
4. प्रत्येक प्रश्न के लिए चार उत्तर विकल्प (A), (B), (C) तथा (D) दिये गये हैं । आपको सही उत्तर के वृत्त को पेन से भरकर काला करना है जैसा कि नीचे दिखाया गया है ।
   **उदाहरण** : Ⓐ Ⓑ ● Ⓓ जबकि (C) सही उत्तर है ।
5. प्रश्नों के उत्तर **केवल प्रश्न पत्र I के अन्दर दिये गये OMR पत्रक पर ही** अंकित करने हैं । यदि आप OMR पत्रक पर दिये गये वृत्त के अलावा किसी अन्य स्थान पर उत्तर चिह्नांकित करते हैं, तो उसका मूल्यांकन नहीं होगा ।
6. अन्दर दिये गये निर्देशों को ध्यानपूर्वक पढ़ें ।
7. कच्चा काम (Rough Work) इस पुस्तिका के अन्तिम पृष्ठ पर करें ।
8. यदि आप OMR पत्रक पर नियत स्थान के अलावा अपना नाम, रोल नम्बर, फोन नम्बर या कोई भी ऐसा चिह्न जिससे आपकी पहचान हो सके, अंकित करते हैं अथवा अभद्र भाषा का प्रयोग करते हैं, या कोई अन्य अनुचित साधन का प्रयोग करते हैं, तो परीक्षा के लिये अयोग्य घोषित किये जा सकते हैं ।
9. आपको परीक्षा समाप्त होने पर मूल OMR पत्रक निरीक्षक महोदय को लौटाना आवश्यक है और परीक्षा समाप्ति के बाद उसे अपने साथ परीक्षा भवन से बाहर न लेकर जायें । हालांकि आप परीक्षा समाप्ति पर OMR पत्रक की डुप्लीकेट प्रति अपने साथ ले जा सकते हैं ।
10. **केवल नीले/काले बाल प्वाईंट पेन का ही इस्तेमाल करें ।**
11. **किसी भी प्रकार का संगणक (कैलकुलेटर) या लाग टेबल आदि का प्रयोग वर्जित है ।**
12. **गलत उत्तरों के लिए कोई अंक काटे नहीं जाएँगे ।**



Latest Sarkari Jobs, Govt Exam Results, Vacancies and updates on one click
Know More

# KANNADA

## Paper – II

**ಸೂಚನೆ :** ಈ ಪತ್ರಿಕೆಯಲ್ಲಿ ಬಹು ಆಯ್ಕೆಯ ಐವತ್ತು **(50)** ಪ್ರಶ್ನೆಗಳಿರುತ್ತವೆ. ಪ್ರತಿಯೊಂದು ಪ್ರಶ್ನೆಗೂ ಎರಡು **(2)** ಅಂಕಗಳಿರುತ್ತವೆ. ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿರಿ.

**ಏಕ ಆಯ್ಕೆಯ ಮಾದರಿಯ ಪ್ರಶ್ನೆಗಳು :**

**1.** ಗುಣಮಧುರಾಂಕನ ಹೆಸರು ಪ್ರಸ್ತಾಪವಾಗಿರುವ ಶಾಸನ.

(A) ಗಂಗಾಧರಂ ಶಾಸನ

(B) ತಮಟಕಲ್ಲು ಶಾಸನ

(C) ಹಲ್ಮಿಡಿ ಶಾಸನ

(D) ಬಾದಾಮಿ ಶಾಸನ

**2.** ಕನ್ನಡ ನಾಡಿನ ಗಡಿ ಭಾಗಗಳನ್ನು ಸೂಚಿಸುವ ಪ್ರಾಚೀನ ಕೃತಿ

(A) ವಡ್ಡಾರಾಧನೆ

(B) ವಿಕ್ರಮಾರ್ಜುನ ವಿಜಯಂ

(C) ಕವಿರಾಜಮಾರ್ಗ

(D) ಶಾಂತಿಪುರಾಣ

**3.** ಹರಿಹರನ ಪುರಾತನ ರಗಳೆಗಳಿಗೆ ಆಕರವಾದ ಗ್ರಂಥ

(A) ಮಹಾಪುರಾಣಂ

(B) ಶಿಲಪ್ಪದಿಕಾರಂ

(C) ಕುಮಾರಸಂಭವಂ

(D) ಪೆರಿಯ ಪುರಾಣಂ

**4.** ರನ್ನ ಕವಿಯ ಆಶ್ರಯದಾತ

(A) ಚಾಲುಕ್ಯ ಸತ್ಯಾಶ್ರಯ ತೈಲಪ

(B) ರಾಷ್ಟ್ರಕೂಟ ಕೃಷ್ಣ

(C) ಕಳಚೂರ್ಯ ಬಿಜ್ಜಳ

(D) ಚಾಲುಕ್ಯ ಜಗದೇಕ ಮಲ್ಲ

**5.** "ಅಬ್ಧಿಯುಮೊರ್ಮೆ ಕಾಲವಶದಿಂ ಮರ್ಯಾದೆಯಂ ದಾಂಟದೇ" ಎಂಬ ಉಕ್ತಿಯನ್ನೊಳಗೊಂಡ ಕಾವ್ಯ

(A) ಶಬರ ಶಂಕರ ವಿಳಾಸ

(B) ರಾಮಚಂದ್ರಚರಿತ ಪುರಾಣಂ

(C) ವರ್ಧಮಾನ ಪುರಾಣಂ

(D) ಸಾಹಸಭೀಮ ವಿಜಯಂ

**6.** ಚೆನ್ನಬಸವಣ್ಣನವರ ವಚನಾಂಕಿತ

(A) ಕೂಡಲ ಚೆನ್ನ ಸಂಗಮದೇವ

(B) ಕಪಿಲಸಿದ್ಧ ಮಲ್ಲಿಕಾರ್ಜುನ

(C) ಚೆನ್ನಮಲ್ಲಿಕಾರ್ಜುನ

(D) ಕೂಡಲ ಸಂಗಮದೇವ

**7.** ಚಾಮರಸ ಕವಿಯ ಕಾಲ

(A) ಕ್ರಿ. ಶ. 1400

(B) ಕ್ರಿ. ಶ. 1380

(C) ಕ್ರಿ. ಶ. 1485

(D) ಕ್ರಿ. ಶ. 1430



Latest Sarkari Jobs, Govt Exam Results, Vacancies and updates on one click
Know More

8. ಭರತೇಶ ವೈಭವ ಕೃತಿಯ ಛಂದಸ್ಸು

(A) ಷಟ್ಪದಿ

(B) ಸಾಂಗತ್ಯ

(C) ಕಂದ

(D) ತ್ರಿಪದಿ

9. ನಳಚರಿತ್ರೆಯ ಕರ್ತೃ

(A) ಜಗನ್ನಾಥ ದಾಸ

(B) ವಿಜಯದಾಸ

(C) ಕನಕದಾಸ

(D) ಪುರಂದರದಾಸ

10. 'ಮಿತ್ರವಿಂದಾ ಗೋವಿಂದ' ಕೃತಿಯ ಸಾಹಿತ್ಯಪ್ರಕಾರ

(A) ಕಾವ್ಯ

(B) ಕಾದಂಬರಿ

(C) ಕಥೆ

(D) ನಾಟಕ

11. ಈಡಿಪಸ್ ನಾಟಕವನ್ನು ಕನ್ನಡಕ್ಕೆ ಅನುವಾದಿಸಿದವರು

(A) ಪಿ. ಲಂಕೇಶ್

(B) ಕೆ. ಮರುಳಸಿದ್ಧಪ್ಪ

(C) ಎ.ಕೆ. ರಾಮಾನುಜನ್

(D) ಗಿರಡ್ಡಿ ಗೋವಿಂದರಾಜ

12. ನವ್ಯ ಸಾಹಿತ್ಯದ ಪ್ರವರ್ತಕ

(A) ಗೋಪಾಲಕೃಷ್ಣ ಅಡಿಗ

(B) ವಿನಾಯಕ ಕೃಷ್ಣ ಗೋಕಾಕ

(C) ಬಿ.ಸಿ. ರಾಮಚಂದ್ರ ಶರ್ಮ

(D) ಶಾಂತಿನಾಥ ದೇಸಾಯಿ

13. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಗೀತಾ ನಾಗಭೂಷಣ ಅವರ ಕೃತಿ

(A) ಕ್ರೌಂಚ ಪಕ್ಷಿಗಳು

(B) ಹಸಿ ಮಾಂಸ ಮತ್ತು ಹದ್ದುಗಳು

(C) ಬದುಕು

(D) ಮುಳ್ಳುಗಳು

14. ಮನೋವೈಜ್ಞಾನಿಕ ವಿಮರ್ಶಕ - ಚಿಂತಕ

(A) ಸಿ.ಜೆ. ಯೂಂಗ್

(B) ಸಿಗ್ಮಂಡ್ ಫ್ರಾಯ್ಡ್

(C) ಆಯ್.ಎ. ರಿಚರ್ಡ್ಸ್

(D) ಜಾರ್ಜ್ ಲುಕಾಕ್ಸ

15. ಬಸವಣ್ಣನವರನ್ನು ಕುರಿತ ಗಿರೀಶ್ ಕಾರ್ನಾಡರ ನಾಟಕ

(A) ಹಿಟ್ಟಿನ ಹುಂಜ

(B) ಹಯವದನ

(C) ಅಗ್ನಿ ಮತ್ತು ಮಳೆ

(D) ತಲೆದಂಡ

16. ರೀತಿ ಸಿದ್ಧಾಂತದ ಪ್ರತಿಪಾದಕ

(A) ವಾಮನ

(B) ಕುಂತಕ

(C) ರಾಜಶೇಖರ

(D) ಆನಂದವರ್ಧನ



Latest Sarkari Jobs, Govt Exam Results, Vacancies and updates on one click
Know More

17. ಕರುಣರಸದ ಸ್ಥಾಯೀಭಾವ

(A) ರತಿ

(B) ಶೋಕ

(C) ಹಾಸ್ಯ

(D) ಉತ್ಸಾಹ

18. ಮಹೋನ್ನತಿ ತತ್ವದ ಪ್ರತಿಪಾದಕ

(A) ಕ್ರೋಚೆ

(B) ಎಡ್ವರ್ಡ್ ಬುಲ್ಲೊ

(C) ಲಾಂಜಿನಸ್

(D) ಹೊರೆಸ್

19. 'ವೆಟ್ಟದುಳ್' ಪದವು ಕನ್ನಡದ ಯಾವ ಭಾಷಾ ಅವಸ್ಥೆಗೆ ಸೇರಿದೆ ?

(A) ಹೊಸಗನ್ನಡ

(B) ಹಳಗನ್ನಡ

(C) ನಡುಗನ್ನಡ

(D) ಪೂರ್ವದ ಹಳಗನ್ನಡ

20. ಇವು ಸಂಧ್ಯಕ್ಷರಗಳು

(A) ಐ ಔ

(B) ಇ ಈ

(C) ಒ ಓ

(D) ಎ ಏ

ಬಹು ಆಯ್ಕೆ ಮಾದರಿಯ ಪ್ರಶ್ನೆಗಳು

21. ರಾಮಾಯಣದ ವಸ್ತುವನ್ನು ಆಧರಿಸಿ ಕೃತಿ ರಚನೆ ಮಾಡಿದವರು

1. ತೊರವೆ ನರಹರಿ - ಮುದ್ದಣ
2. ನಾಗಚಂದ್ರ - ಚಾಮರಸ
3. ಕುವೆಂಪು - ಪು. ತಿ. ನ.
4. ಕುಮುದೇಂದು - ನಂಜುಂಡ ಕವಿ

ಇವುಗಳಲ್ಲಿ ಸರಿಯಾದ ಉತ್ತರ

(A) 1 ಮತ್ತು 3

(B) 1 ಮತ್ತು 2

(C) 2 ಮತ್ತು 4

(D) 3 ಮತ್ತು 4

22. ಇವು 'ಸಾಂಗತ್ಯ'ದಲ್ಲಿರುವ ಕೃತಿಗಳು

1. ಭರತೇಶ ವೈಭವ - ಹದಿಬದೆಯ ಧರ್ಮ
2. ಬಸವರಾಜ ವಿಜಯ - ಅದ್ಭುತ ರಾಮಾಯಣ
3. ಕುಮಾರರಾಮನ ಕಥೆ - ರಾಮಧಾನ್ಯ ಚರಿತೆ
4. ಮೋಹನ ತರಂಗಿಣಿ - ಪರಮಾನುಭವ ಬೋಧೆ

ಇವುಗಳಲ್ಲಿ ಸರಿಯಾದ ಉತ್ತರ

(A) 1 ಮತ್ತು 2

(B) 1 ಮತ್ತು 4

(C) 2 ಮತ್ತು 3

(D) 3 ಮತ್ತು 4



Latest Sarkari Jobs, Govt Exam Results, Vacancies and updates on one click
Know More

23. ಇವು ಅರ್ಥವ್ಯತ್ಯಾಸಕ್ಕೆ ಉದಾಹರಣೆಗಳು

1. ಕುಪ್ಪಸ - ಭದ್ರ

2. ಅವಸರ - ನೆಲ

3. ಸಮಯ - ಅಮ್ಮ

4. ಮನೆ - ಅಪರೂಪ

ಇವುಗಳಲ್ಲಿ ಸರಿಯಾದ ಉತ್ತರ

(A) 1 ಮತ್ತು 2

(B) 2 ಮತ್ತು 3

(C) 1 ಮತ್ತು 3

(D) 2 ಮತ್ತು 4

24. ಇವರು ವಿಮರ್ಶಾ ಕ್ಷೇತ್ರಕ್ಕೆ ಮೌಲಿಕ ಕೊಡುಗೆ ನೀಡಿದವರು

1. ವೀಣಾ ಶಾಂತೇಶ್ವರ

2. ಎಂ. ಎಸ್. ಲಠ್ಠೆ

3. ಕೀರ್ತಿನಾಥ ಕುರ್ತಕೋಟಿ

4. ಜಿ.ಎಚ್. ನಾಯಕ

ಇವುಗಳಲ್ಲಿ ಸರಿಯಾದ ಉತ್ತರ

(A) 1 ಮತ್ತು 2

(B) 2 ಮತ್ತು 3

(C) 2 ಮತ್ತು 4

(D) 3 ಮತ್ತು 4

25. ಇವು ಆಧುನಿಕ ಮಹಾಕಾವ್ಯಗಳು

1. ಭಾರತ ಸಿಂಧು ರಶ್ಮಿ

2. ಗೊಲ್ಗೊಥಾ

3. ಸಖೀಗೀತ

4. ಶ್ರೀ ರಾಮಾಯಣದರ್ಶನಂ

ಇವುಗಳಲ್ಲಿ ಸರಿಯಾದ ಉತ್ತರ

(A) 1 ಮತ್ತು 4

(B) 2 ಮತ್ತು 3

(C) 3 ಮತ್ತು 4

(D) 1 ಮತ್ತು 2

26. ಇವು ಕನ್ನಡ ಭಾಷೆಯ ಪ್ರಭೇದಗಳು

1. ಪೂರ್ವದ ಹಳಗನ್ನಡ - ಮೈಸೂರು ಕನ್ನಡ

2. ಕರಾವಳಿ ಕನ್ನಡ - ಧಾರವಾಡ ಕನ್ನಡ

3. ಗುಲಬರ್ಗಾ ಕನ್ನಡ - ರಾಯಚೂರು ಕನ್ನಡ

4. ನಡುಗನ್ನಡ - ಸೋಲಿಗರ ಕನ್ನಡ

ಇವುಗಳಲ್ಲಿ ಸರಿಯಾದ ಉತ್ತರ

(A) 1 ಮತ್ತು 2

(B) 2 ಮತ್ತು 3

(C) 1 ಮತ್ತು 3

(D) 3 ಮತ್ತು 4



Latest Sarkari Jobs, Govt Exam Results, Vacancies and updates on one click
Know More

**27.** ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ ?

1. ಭಾಮಹ - ಕಾವ್ಯಾಲಂಕಾರ
2. ಆನಂದ ವರ್ಧನ - ವಕ್ರೋಕ್ತಿ ಜೀವಿತ
3. ದಂಡಿ - ಕಾವ್ಯಾದರ್ಶ
4. ವಾಮನ - ಧ್ವನ್ಯಾಲೋಕ

ಇವುಗಳಲ್ಲಿ ಸರಿಯಾದ ಉತ್ತರ

(A) 2 ಮತ್ತು 4

(B) 2 ಮತ್ತು 3

(C) 1 ಮತ್ತು 3

(D) 1 ಮತ್ತು 2

**28.** ಇವು ಸಂಶೋಧನ ಕೃತಿಗಳು

1. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ
2. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ
3. ಕರ್ನಾಟಕ-ಸಂಸ್ಕೃತಿ ಸಮೀಕ್ಷೆ
4. ಕಾವ್ಯಾರ್ಥ ಚಿಂತನ

ಇವುಗಳಲ್ಲಿ ಸರಿಯಾದ ಉತ್ತರ

(A) 2 ಮತ್ತು 4

(B) 1 ಮತ್ತು 4

(C) 3 ಮತ್ತು 4

(D) 1 ಮತ್ತು 2

**29.** ಇವು ಶಿವರಾಮ ಕಾರಂತರ ಕೃತಿಗಳು

1. ನಟಸಾರ್ವಭೌಮ
2. ಮಾಡಿ ಮಡಿದವರು
3. ಯಕ್ಷಗಾನ ಬಯಲಾಟ
4. ಅಳಿದ ಮೇಲೆ

ಇವುಗಳಲ್ಲಿ ಸರಿಯಾದ ಉತ್ತರ

(A) 3 ಮತ್ತು 4

(B) 1 ಮತ್ತು 2

(C) 2 ಮತ್ತು 3

(D) 1 ಮತ್ತು 3

**30.** ಇವು ಚನ್ನವೀರ ಕಣವಿ ಅವರ ಕವನ ಸಂಕಲನಗಳು

1. ತೆರೆದ ಬಾಗಿಲು
2. ದೀಪಧಾರಿ
3. ಜೀವಧ್ವನಿ
4. ಕಾರ್ತೀಕ

ಇವುಗಳಲ್ಲಿ ಸರಿಯಾದ ಉತ್ತರ

(A) 1 ಮತ್ತು 2

(B) 2 ಮತ್ತು 3

(C) 1 ಮತ್ತು 3

(D) 1 ಮತ್ತು 4



Latest Sarkari Jobs, Govt Exam Results, Vacancies and updates on one click
Know More

**ಲೇಖನ ಭಾಗ ಆಧಾರಿತ ಬಹು ಆಯ್ಕೆಯ ಮಾದರಿ.**

ಈ ಕೆಳಗಿನ ಲೇಖನ ಭಾಗವನ್ನು ಓದಿ ಅದನ್ನು ಆಧರಿಸಿದ ಪ್ರಶ್ನೆಗಳಿಗೆ ಉತ್ತರಿಸಿರಿ. ಉತ್ತರದ ಸಂಜ್ಞೆಗಳನ್ನು ನಿಗದಿತ ಸ್ಥಳದಲ್ಲಿ ಗುರುತಿಸಿರಿ.

**(31 ನೇ ಪ್ರಶ್ನೆಯಿಂದ 35 ನೇ ಪ್ರಶ್ನೆಯವರೆಗೆ)**

ಯಾವ ಯಾವ ವಿಧಾನಗಳ ಮೂಲಕ ವಿಮರ್ಶಕನ ಮನಸ್ಸು ಕೃತಿ ರಸಾಸ್ವಾದನ ಕ್ರಿಯೆಯಲ್ಲಿ ನಮಗೆ ನೆರವಾಗಲು ಯತ್ನಿಸುತ್ತದೆಯೋ, ಅಷ್ಟು ರೀತಿಗಳನ್ನೂ ನಾವು ವಿಮರ್ಶೆಯ ಪ್ರಕಾರಗಳೆಂದು ಭಾವಿಸಬಹುದು. ದೈನಂದಿನ ಪತ್ರಿಕಾವಿಮರ್ಶೆಯಿಂದ ಹಿಡಿದು, ಕೃತಿಯೊಂದನ್ನು ಕುರಿತ ಉದ್ಗ್ರಂಥದ ತನಕ ಇದರ ಹರಹನ್ನು ಗುರುತಿಸಬಹುದು. ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆ ಇತ್ಯಾದಿಗಳಲ್ಲಿ ಕೃತಿ ವಿಮರ್ಶೆಗೆ ಒಂದಿಷ್ಟು ಸ್ಥಳ ಮೀಸಲಾಗಿರುತ್ತದೆ. ಬಹು ಬೇಗ ವಿಸ್ತಾರವಾದ ಜನಸಮೂಹಕ್ಕೆ ಸುದ್ದಿಗಳನ್ನು ಕೊಂಡೊಯ್ಯುವ ಈ ಪತ್ರಿಕೆಗಳಲ್ಲಿ, ಪುಸ್ತಕಗಳನ್ನು ಕುರಿತ ವಿಮರ್ಶೆಯೂ ವಾರ್ತೆಯ ಒಂದು ಅಂಗವಾಗಿ ಜನತೆಯನ್ನು ತಲುಪುತ್ತದೆ. ಇದಲ್ಲದೆ ಕಲೆ ಸಾಹಿತ್ಯ ವಿಮರ್ಶೆಗೆಂದೇ ಮೀಸಲಾದ ಕೆಲವು ಪತ್ರಿಕೆಗಳೂ ಉಂಟು. ಅವುಗಳ ಗಮನ ಕಾವ್ಯ-ವಿಮರ್ಶೆಗಳಲ್ಲಿ ವಿಶೇಷ ಆಸಕ್ತಿಯುಳ್ಳ ಪರಿಮಿತ ಓದುಗರ ವಲಯದ ಕಡೆಗೆ. ಪತ್ರಿಕೆಗಳಲ್ಲಿ- ಸಾಮಾನ್ಯವಾಗಿ ವಾರ, ಮಾಸಿಕ ಇತ್ಯಾದಿಗಳಲ್ಲಿ-ಬರುವ ಗ್ರಂಥ ಪ್ರಶಂಸೆ (Blurb), ಗ್ರಂಥಾವಲೋಕನ (Review) ಇವುಗಳ ಉದ್ದೇಶ ಇಡೀ ಪುಸ್ತಕದ ಸಮಗ್ರ ವಿಮರ್ಶೆ ಹಾಗೂ ಮೌಲ್ಯನಿರ್ಣಯ ಅಲ್ಲ ; ಅದಕ್ಕೆ ಇಲ್ಲಿ ಸ್ಥಳಾವಕಾಶವೂ ಇಲ್ಲ. ಅವುಗಳ ಉದ್ದೇಶ, ಇಂಥ ಕೆಲವು ಪುಸ್ತಕಗಳು ಈಗ ತಾನೆ ಬಂದಿವೆ ; ಅವುಗಳ ಸಾರ ಇಷ್ಟು ; ಅವು ಓದಲು ಅರ್ಹವಾಗಿವೆ, ಅಥವಾ ಇಲ್ಲ- ಎನ್ನುವ ವಿವರಗಳನ್ನು ಪ್ರಚುರಪಡಿಸುವುದು. ಅದಕ್ಕೆ ತಕ್ಕ ಹಾಗೆ ವಿಮರ್ಶೆ ಮಾಡತಕ್ಕವರು ಓದುಗರಲ್ಲಿ ಕುತೂಹಲ, ಆಸಕ್ತಿಗಳನ್ನು ಉಂಟು ಮಾಡುವಷ್ಟರಮಟ್ಟಿಗೆ ಆ ಪುಸ್ತಕದ ಸಾರವನ್ನೋ, ಭಾಗವನ್ನೋ, ಪಂಕ್ತಿಗಳನ್ನೋ ಎತ್ತಿ ತೋರಿಸುತ್ತಾರೆ. ಇಂಥ ಪತ್ರಿಕಾವಿಮರ್ಶೆಯಲ್ಲಿ, ಅತ್ಯಂತ ಸಮರ್ಥರಾದ ವಿಮರ್ಶಕರು ದೀರ್ಘವಾದ ಆಲೋಚನೆಯಿಂದ, ಅದರ ಬೆಲೆಯನ್ನು ಅಳೆದು ತೂಗಿ, ಅದರ ಸಾರವನ್ನು ಸಂಗ್ರಹವಾಗಿ ರೂಪಿಸಿದರೆ ಅದು ಸಾರ್ಥಕವಾದ ವಿಮರ್ಶೆಯೂ ಆಗಬಹುದು. ಆದರೆ ಅಂಥವರೆಷ್ಟು ಮಂದಿ ನಮ್ಮಲ್ಲಿ ಪತ್ರಿಕೆಗಳಿಗೆ ಬರೆಯುತ್ತಾರೆ, ಅಥವಾ ಬರೆಯುವಂತೆ ಪತ್ರಿಕೆಯವರು ಕೇಳಿಕೊಳ್ಳುತ್ತಾರೆ ? ಎಷ್ಟೋ ಪತ್ರಿಕೆಗಳಲ್ಲಿ ಬರುವ ಈ ವಿಮರ್ಶೆಗಳನ್ನು ನೋಡಿದರೆ ಅವು 'ಸಂತೆಯ ಹೊತ್ತಿಗೆ ನೆಯ್ದ ಮೂರು ಮೊಳ' ಗಳಾಗಿ ತೋರುವುದು ಸ್ವಾಭಾವಿಕ ಹಾಗೂ ಅನಿವಾರ್ಯ.

ಇದರ ಜೊತೆಗೆ ವಿಮರ್ಶಕನ ಶಕ್ತಿ ಸರಿಯಾಗಿ ಬೆಳೆಯಬೇಕಾದರೆ, ಅದಕ್ಕೆ ನಮ್ಮ ಶಿಕ್ಷಣ ಕ್ರಮದಲ್ಲಿ ಸರಿಯಾದ ಸ್ಥಾನವನ್ನು ಕಲ್ಪಿಸಬೇಕು. ಕೃತಿಯನ್ನು ಓದುವುದು ಹೇಗೆ ಎನ್ನುವುದರ ತಿಳುವಳಿಕೆಯನ್ನು ಕೊಡಬೇಕು. ಶಾಲೆ-ಕಾಲೇಜುಗಳಲ್ಲಿ ವಿಮರ್ಶೆಯ ಶಿಕ್ಷಣ ರಂಗವೊಂದು ಏರ್ಪಡಾಗಬೇಕು. ಐ. ಎ. ರಿಚರ್ಡ್ಸ್ ಅವರು ಇಂಥ ಒಂದು ಪ್ರಯೋಗವನ್ನು ನಡೆಯಿಸಿದ್ದರ ಪರಿಣಾಮವನ್ನು ಅವರ "Practical Criticism" ನಲ್ಲಿ ನೋಡಬಹುದು. ಹತ್ತಾರು ವಿದ್ಯಾರ್ಥಿಗಳಿಗೆ ಒಂದೇ ಪದ್ಯವನ್ನು, ಅದು ಯಾವ ಕವಿಯದು ಎಂಬ ವಿಚಾರವನ್ನು ಹೇಳದೆ ಕೊಟ್ಟು, ಅವರಿಂದ ಬಂದ ವಿವಿಧಾಭಿಪ್ರಾಯಗಳನ್ನು ಸಂಗ್ರಹಿಸಿ,



Latest Sarkari Jobs, Govt Exam Results, Vacancies and updates on one click
Know More

ಅವುಗಳಲ್ಲಿ ಆ ಒಂದು ಕವನವನ್ನು ಕುರಿತು, ಸಮಾನವಾದ ಅಂಶಗಳೆಷ್ಟು, ವೈಪರೀತ್ಯ-ಗಳೇನು, ಎನ್ನುವುದನ್ನು ಕಂಡುಕೊಂಡು ಸರಿಯಾದ ತೀರ್ಪನ್ನು ಕೊಡುವುದು ಹೇಗೆ ಎನ್ನುವ ವಿಧಾನವನ್ನು ಕೊಟ್ಟಿದ್ದಾರೆ. ನಮ್ಮಲ್ಲಿಯೂ ಈ ಬಗೆಯ ಪ್ರಾಯೋಗಿಕ ವಿಮರ್ಶೆ ನಡೆಯಬೇಕಾಗಿದೆ.

ನಮ್ಮಲ್ಲಿ ಉತ್ತಮವಾದ ವಿಮರ್ಶೆ ಬೆಳೆಯಬೇಕಾದರೆ, ವಿಮರ್ಶಕರಿಗೆ ಮೊದಲು ಭಾರತೀಯ ಕಾವ್ಯ-ಮೀಮಾಂಸೆಯ, ಹಾಗೂ ತಮ್ಮ ಸಾಹಿತ್ಯ ಪರಂಪರೆಯ ಪರಿಚಯವಿರಬೇಕು. ಭಾರತೀಯ ಕಾವ್ಯ ಮೀಮಾಂಸೆಯಲ್ಲಿ ಕಾವ್ಯ ಚರ್ಚೆಗೆಂದು ಅವರು ಬಳಸಿದ ನೂರಾರು ಪಾರಿಭಾಷಿಕ ಪದಗಳಿವೆ ; ಅವುಗಳಲ್ಲಿ ಕೆಲವನ್ನಾದರೂ ಇಂದು ಲಲಾವಣೆಗೆ ತಂದು, ವಿಮರ್ಶೆಯ ಪರಿಭಾಷೆಗೆ ಸಹೃದಯರ ಕಿವಿ ಬಳಕೆಯಾಗುವಂತೆ ಮಾಡಲು ಸಾಧ್ಯವಿದೆ. ವಾಚ್ಯ ; ವ್ಯಂಗ್ಯ ; ಗುಣಿಭೂತವ್ಯಂಗ್ಯ ; ಭಾವ ಶಬಲತೆ ; ಭಾವಸಂಧಿ ; ಅರ್ಥದುಷ್ಟ ; ಶ್ರುತಿಕಷ್ಟ ; ಭಾವ ; ರಸ - ಇಂಥ ಎಷ್ಟೊಂದು ಪದಗಳು ಇಂದು ಬಳಕೆಯಾಗುವುದು ಕಡಿಮೆಯಾಗಿ ಹೋಗಿದೆ ! ಜೊತೆಗೆ ನಮ್ಮ ಹಳಗನ್ನಡ ಕಾವ್ಯಪರಂಪರೆಯಲ್ಲಿ, ಅವರ ಕಾವ್ಯಾರಂಭದ ಪ್ರಸ್ತಾವನೆಗಳಲ್ಲಿಯೂ ಕೆಲವು ಮಾತುಗಳು ದೊರೆಯುತ್ತವೆ. ಈ ಎಲ್ಲ ಸಾಮಗ್ರಿಗಳನ್ನೂ ಹೊಸ ರೀತಿಯಲ್ಲಿ ಬಳಸಿ, ಇಂದಿನ ವಿಮರ್ಶೆಯ ಭಾಷೆಯೊಂದಿಗೆ ಹೊಂದಿಸಲು ಸಾಧ್ಯವಿದೆ. ಎಲ್ಲದಕ್ಕೂ ನಾವು ಆಂಗ್ಲ ಸಾಹಿತ್ಯದ ಕಡೆಗೇ ನೋಡಬೇಕಾಗಿಲ್ಲ ; ಅಲ್ಲದೆ ಅಲ್ಲಿನ ಸಾಹಿತ್ಯಕ್ಕೆ ಅನುಸಾರವಾಗಿ ಅವರಲ್ಲಿ ಮೂಡಿದ ವಿಮರ್ಶೆಯ ತತ್ವಗಳೇ, ನಮ್ಮ ಸಾಹಿತ್ಯವನ್ನು ಅಳೆದು ನೋಡುವ ಮೂಲಮಾನಗಳಾಗುತ್ತವೆ ಎನ್ನುವ ಭ್ರಮೆಯನ್ನು ಬಿಡಬೇಕು. ಏಕೆಂದರೆ ಪ್ರತಿಯೊಂದು ಸಾಹಿತ್ಯಕ್ಕೂ ತನ್ನದೇ ಆದ ಪರಂಪರೆಯಿದೆ ; ಅದನ್ನು ರೂಪಿಸಿದ ದೇಶದ ಮನೋಭಾವದ ಹಿನ್ನೆಲೆಯಿದೆ. ಅಲ್ಲಲ್ಲಿನ ಸಾಹಿತ್ಯಾಭ್ಯಾಸದಿಂದಲೇ ಹಲವು ಮೂಲತತ್ವಗಳನ್ನು ಕಂಡುಕೊಂಡು, ಅದರ ಅಂತರಂಗದ ನಿಯಮಗಳನ್ನು ತಿಳಿದು, ಅದರ ಮಾನದಂಡದಿಂದ ಸಾಹಿತ್ಯ ವಿಮರ್ಶೆಗೆ ತೊಡಗುವುದು ಕ್ಷೇಮ. ಈ ದೃಷ್ಟಿಯಿಂದ ನಿಜವಾದ ವಿಮರ್ಶಕನಿಗೆ ತನ್ನ ಸಾಹಿತ್ಯ ಪರಂಪರೆಯ ಪ್ರಜ್ಞೆ ಇರುವುದು ಅಗತ್ಯವಾಗಿದೆ. ಅಂದ ಮಾತ್ರಕ್ಕೆ ಬೇರೆಯ ಸಾಹಿತ್ಯವಿಮರ್ಶೆಯ ಅಭ್ಯಾಸದಿಂದ ವಿಮರ್ಶಕನಿಗೆ ಲಾಭವಾಗುವುದಿಲ್ಲವೆಂದು ಅರ್ಥವಲ್ಲ. ಬೇರೆ ಸಾಹಿತ್ಯ ವಿಮರ್ಶೆಯ, ಅದರಲ್ಲೂ ಪಶ್ಚಿಮದ ಸಾಹಿತ್ಯ ವಿಮರ್ಶೆಯ ಸಮರ್ಪಕವಾದ ಪರಿಚಯ, ವಿಮರ್ಶಕನಿಗೆ ಅತ್ಯಂತ ಅಗತ್ಯ-ಅದೂ ಪ್ರಚೋದನೆಗೆ, ನವ ವಿಧಾನಗಳ ಪರಿಚಯಕ್ಕೆ ; ಕೇವಲ ಅನುಕರಣ ಅನುಸರಣಗಳಿಗಲ್ಲ.

**31.** ಈ ಲೇಖನ ಭಾಗದ ಪ್ರಧಾನ ಆಶಯ

(A) ವಿಮರ್ಶಕನಿಗೆ ಭಾರತೀಯ ಪರಂಪರೆಯ ಅರಿವು ಅನಗತ್ಯ.

(B) ವಿಮರ್ಶಕನ ಹೊಣೆಗೇಡಿತನ.

(C) ಗ್ರಂಥ ಪ್ರಶಂಸೆಯ ಮಹತ್ವ.

(D) ವಿಮರ್ಶೆಯ ಸ್ವರೂಪ ಚಿಂತನೆ.

**32.** ಪತ್ರಿಕೆಗಳಲ್ಲಿ "ಗ್ರಂಥಾವಲೋಕನ"ದ ಪ್ರಯೋಜನ

(A) ಗ್ರಂಥಗಳ ಬಗ್ಗೆ ಓದುಗರಲ್ಲಿ ಆಸಕ್ತಿಯನ್ನು ಉಂಟು ಮಾಡುವುದು.

(B) ಗ್ರಂಥಗಳ ಪ್ರಶಂಸೆ ಮಾಡುವುದು.

(C) ಗ್ರಂಥಗಳ ಸಮಗ್ರ ವಿಮರ್ಶೆ ಮಾಡುವುದು.

(D) ಗ್ರಂಥಗಳಿಗೆ ಪ್ರಚಾರವನ್ನು ಒದಗಿಸುವುದು.



Latest Sarkari Jobs, Govt Exam Results, Vacancies and updates on one click
Know More

33. 'ಪ್ರಾಯೋಗಿಕ ವಿಮರ್ಶೆ'ಯ ಉದ್ದೇಶ

(A) ಕೃತಿಯ ಓದಿನ ಬಗ್ಗೆ ತಿಳಿಸುವುದು

(B) ಕೃತಿಕಾರನ ಮನೋಧರ್ಮವನ್ನು ಅರಿಯುವುದು.

(C) ಕೃತಿಯ ಕುರಿತು ಸರಿಯಾದ ತೀರ್ಪು ಕೊಡುವ ವಿಧಾನ ತಿಳಿಸುವುದು.

(D) ಕೃತಿಯ ಹಿನ್ನೆಲೆಯನ್ನು ತಿಳಿಸುವುದು.

34. ವಿಮರ್ಶಕನಿಗೆ ಇರಬೇಕಾದ ಪ್ರಾಥಾಮಿಕ ಅರಿವು

(A) ಸಮಕಾಲೀನ ಸಾಹಿತ್ಯದ ತಿಳುವಳಿಕೆ

(B) ಪಾರಂಪರಿಕ ಸಾಹಿತ್ಯದ ತಿಳುವಳಿಕೆ

(C) ಅನ್ಯಭಾಷಾ ಸಾಹಿತ್ಯದ ಜ್ಞಾನ

(D) ಇತಿಹಾಸದ ಬಗೆಗಿನ ಅರಿವು

35. ವಿಮರ್ಶೆಯ ಮೂಲ ಪ್ರಕ್ರಿಯೆ

(A) ತೌಲನಿಕ ದೃಷ್ಟಿಕೋನ

(B) ನಿರ್ದಾಕ್ಷಿಣ್ಯ ನಿಲುವು

(C) ಶೋಧನ ಕ್ರಿಯೆ

(D) ರಸಾಸ್ವಾದನ ಕ್ರಿಯೆ

**ಹೇಳಿಕೆ-ವಿವರಣೆ ಆಧಾರಿತ ಬಹು ಆಯ್ಕೆಯ ಮಾದರಿ**

36. **ಹೇಳಿಕೆ** : "ಮನಸಿಜನ ಮಾಯೆ ವಿಧಿ ವಿಳಸನದ ನೆರಂಬಡೆಯೆ ಕೊಂದು ಕೂಗದೆ ನರರಂ"

**ವಿವರಣೆ** : ಕಾಮನಿಗೆ ದುರದೃಷ್ಟದ ನೆರವು ಸಿಕ್ಕಾಗ ಆತ ಮಾನವರನ್ನು ನಾಶ ಮಾಡದೆ ಬಿಡಲಾರ.

(A) ಹೇಳಿಕೆ ಸರಿ, ವಿವರಣೆ ತಪ್ಪು

(B) ಹೇಳಿಕೆ ತಪ್ಪು, ವಿವರಣೆ ಸರಿ

(C) ಹೇಳಿಕೆ ಸರಿ, ವಿವರಣೆ ಸರಿ

(D) ಹೇಳಿಕೆ ತಪ್ಪು, ವಿವರಣೆ ತಪ್ಪು

37. **ಹೇಳಿಕೆ** : ಭಕ್ತನು ಭವಿಯಾದಡೆ ಅದೇನನು ಉಪಮಿಸುವನಯ್ಯ

**ವಿವರಣೆ** : ಭಕ್ತನಾಗಿ ಹುಟ್ಟುವುದನ್ನು ಯಾವುದಕ್ಕೆ ಹೋಲಿಸುವೆನು

(A) ಹೇಳಿಕೆ ತಪ್ಪು, ವಿವರಣೆ ಸರಿ

(B) ಹೇಳಿಕೆ ತಪ್ಪು, ವಿವರಣೆ ತಪ್ಪು

(C) ಹೇಳಿಕೆ ಸರಿ, ವಿವರಣೆ ಸರಿ

(D) ಹೇಳಿಕೆ ಸರಿ, ವಿವರಣೆ ತಪ್ಪು

38. **ಹೇಳಿಕೆ** : 'ಪಂಚೇಂದ್ರಿಯಂಗಳೊಳು ಒಂದಧಮ ನಾಲ್ಕಧಿಕವೆ' ಎಂದು ಕೇಳಿದರು ಗಾನ ರಾಣಿಯರು.

**ವಿವರಣೆ** : ನಾಲ್ಕು ಪಂಚೇಂದ್ರಿಯಗಳಲ್ಲಿ ಒಂದು ಮಾತ್ರ ಶ್ರೇಷ್ಠ ಎಂಬುದು ಗಾನ ರಾಣಿಯರ ಮಾತಿನ ಆಶಯ.

(A) ಹೇಳಿಕೆ ತಪ್ಪು, ವಿವರಣೆ ತಪ್ಪು

(B) ಹೇಳಿಕೆ ಸರಿ, ವಿವರಣೆ ಸರಿ

(C) ಹೇಳಿಕೆ ತಪ್ಪು, ವಿವರಣೆ ಸರಿ

(D) ಹೇಳಿಕೆ ಸರಿ, ವಿವರಣೆ ತಪ್ಪು

39. **ಹೇಳಿಕೆ** : ಓ ನನ್ನ ಚೇತನ, ಆಗು ನೀ ಅನಿಕೇತನ.

**ವಿವರಣೆ** : ನನ್ನ ಚೈತನ್ಯವೇ ನೀನು ಬಾನಿನಲ್ಲಿ ಹಾರಾಡುವ ಬಾವುಟವಾಗಬೇಕು.

(A) ಹೇಳಿಕೆ ತಪ್ಪು, ವಿವರಣೆ ಸರಿ

(B) ಹೇಳಿಕೆ ಸರಿ, ವಿವರಣೆ ತಪ್ಪು

(C) ಹೇಳಿಕೆ ಸರಿ, ವಿವರಣೆ ಸರಿ

(D) ಹೇಳಿಕೆ ತಪ್ಪು, ವಿವರಣೆ ತಪ್ಪು



Latest Sarkari Jobs, Govt Exam Results, Vacancies and updates on one click
Know More

40. ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ ?

(A) ಬ್ರಹ್ಮಶಿವ - ಧರ್ಮಾಮೃತ

(B) ನೇಮಿಚಂದ್ರ - ವರ್ಧಮಾನ ಪುರಾಣ

(C) ಲಕ್ಕಣ ದಂಡೇಶ - ಶಿವತತ್ವ ಚಿಂತಾಮಣಿ

(D) ಪುರಂದರ ದಾಸ - ರಾಮಧಾನ್ಯಚರಿತೆ

41. ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಿಕೆಯಾಗುವುದಿಲ್ಲ ?

(A) ಚಂದ್ರಶೇಖರ ಪಾಟೀಲ - ಕೊಡೆಗಳು

(B) ಪಿ. ಲಂಕೇಶ - ಹುಳಿಮಾವಿನ ಮರ

(C) ತ್ರಿವೇಣಿ - ಬೆಕ್ಕಿನ ಕಣ್ಣು

(D) ಬರಗೂರು ರಾಮಚಂದ್ರಪ್ಪ - ಊರು ಕೇರಿ

42. ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ ?

(A) ಜೀ. ಶಂ. ಪರಮ ಶಿವಯ್ಯ - ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು

(B) ಎಲ್.ಆರ್. ಹೆಗಡೆ - ಕನ್ನಡ ಜನಪದ ಗೀತೆಗಳು

(C) ಸೋಮಶೇಖರ ಇಮ್ರಾಪುರ - ಗರತಿಯ ಹಾಡು

(D) ಬಿ.ಬಿ. ಹೆಂಡಿ - ಜೀವನ ಜೋಕಾಲಿ

43. ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ ?

(A) ಹೀನಾರ್ಥ ಪ್ರಾಪ್ತಿ - ಎಣ್ಣೆ

(B) ಅರ್ಥ ಸಂಕೋಚ - ಒಡವೆ

(C) ಉತ್ತಮಾರ್ಥ ಪ್ರಾಪ್ತಿ - ಪೆದ್ದ

(D) ಅರ್ಥ ವಿಸ್ತಾರ - ಸೀರೆ

44. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಿಕೆಯಾಗುವುದಿಲ್ಲ ?

(A) ಮಿರ್ಜಿ ಅಣ್ಣಾರಾಯ - ನಿಸರ್ಗ

(B) ತೀ.ನಂ. ಶ್ರೀಕಂಠಯ್ಯ - ಒಲುಮೆ

(C) ದೇ.ಜವರೇಗೌಡ - ಕನ್ನಡ ಸಾಹಿತ್ಯ ಚರಿತ್ರೆ

(D) ಆರ್.ಸಿ.ಹಿರೇಮಠ - ಮಹಾಕವಿ ರಾಘವಾಂಕ

45. ಬಹು ಆಯ್ಕೆಯ ಜೋಡಣೆ

| | |
|---|---|
| a. ಕೇಶಿರಾಜ | 1. ರಾಜಾವಳಿ ಕಥೆ |
| b. ೧ ನೇ ನಾಗವರ್ಮ | 2. ಕಾವ್ಯಾವಲೋಕನ |
| c. ತಿರುಮಲಾರ್ಯ | 3. ಶಬ್ದಮಣಿ ದರ್ಪಣ |
| d. ದೇವಚಂದ್ರ | 4. ಅಪ್ರತಿಮ ವೀರ ಚರಿತೆ |
| | 5. ಛಂದೋಂಬುಧಿ |

ಇವುಗಳಲ್ಲಿ ಸರಿಯಾದ ಉತ್ತರ :

| | a | b | c | d |
|---|---|---|---|---|
| (A) | 3 | 5 | 4 | 1 |
| (B) | 1 | 2 | 3 | 4 |
| (C) | 3 | 1 | 5 | 2 |
| (D) | 5 | 4 | 1 | 4 |



Latest Sarkari Jobs, Govt Exam Results, Vacancies and updates on one click
Know More

46. ಬಹು ಆಯ್ಕೆಯ ಜೋಡಣೆ

| | |
|---|---|
| a. ತತ್ಪುರುಷ | 1. ಮುಕ್ಕಣ್ಣ |
| b. ಕರ್ಮಧಾರಯ | 2. ಅಂಗಾಲು |
| c. ಬಹುವ್ರೀಹಿ | 3. ಇತ್ತಂಡ |
| d. ಅಂಶೀ | 4. ಮಳೆಗಾಲ |
| | 5. ಹೆಬ್ಬಾಗಿಲು |

ಇವುಗಳಲ್ಲಿ ಸರಿಯಾದ ಉತ್ತರ :

| | a | b | c | d |
|---|---|---|---|---|
| (A) | 1 | 2 | 3 | 4 |
| (B) | 4 | 3 | 2 | 1 |
| (C) | 1 | 2 | 4 | 3 |
| (D) | 4 | 5 | 1 | 2 |

47. ಬಹು ಆಯ್ಕೆಯ ಜೋಡಣೆ

| | |
|---|---|
| a. ಸಿಂಪಿ ಲಿಂಗಣ್ಣ | 1. ವೈಶಾಖ |
| b. ಎ.ಎನ್.ಮೂರ್ತಿರಾವ್ | 2. ಮಹಾಚೈತ್ರ |
| c. ಚದುರಂಗ | 3. ಗೋಕರ್ಣದ ಗೌಡಶಾನಿ |
| d. ಎಚ್.ಎಸ್. ಶಿವಪ್ರಕಾಶ | 4. ನೂರು ಗಡಿಗೆ ಒಂದು ಬಡಿಗೆ |
| | 5. ಹಗಲು ಗನಸುಗಳು |

ಇವುಗಳಲ್ಲಿ ಸರಿಯಾದ ಉತ್ತರ :

| | a | b | c | d |
|---|---|---|---|---|
| (A) | 1 | 3 | 2 | 4 |
| (B) | 4 | 5 | 1 | 2 |
| (C) | 3 | 2 | 4 | 1 |
| (D) | 1 | 2 | 3 | 4 |

ಅನುಕ್ರಮ ಮಾದರಿ

48. ಈ ಕೆಳಗಿನವುಗಳಲ್ಲಿ ಸರಿಯಾದ ಕಾಲಾನುಕ್ರಮವನ್ನು ಗುರುತಿಸಿ.

(A) ಬಸವಪುರಾಣ-ಹದಿಬದೆಯಧರ್ಮ-ಅನಂತನಾಥಪುರಾಣ-ಗಿರಿಜಾಕಲ್ಯಾಣ

(B) ಅನಂತನಾಥಪುರಾಣ-ಗಿರಿಜಾಕಲ್ಯಾಣ-ಬಸವಪುರಾಣ-ಹದಿಬದೆಯಧರ್ಮ

(C) ಹದಿಬದೆಯಧರ್ಮ-ಗಿರಿಜಾಕಲ್ಯಾಣ-ಅನಂತಪುರಾಣ- ಬಸವಪುರಾಣ

(D) ಗಿರಿಜಾಕಲ್ಯಾಣ- ಅನಂತನಾಥಪುರಾಣ-ಬಸವಪುರಾಣ- ಹದಿಬದೆಯಧರ್ಮ

49. (A) ದ.ರಾ. ಬೇಂದ್ರೆ-ಕುವೆಂಪು-ಡಿ.ವಿ.ಜಿ.-ಪು.ತಿ.ನ.

(B) ಡಿ.ವಿ.ಜಿ.- ದ.ರಾ. ಬೇಂದ್ರೆ-ಕುವೆಂಪು-ಪು.ತಿ.ನ.

(C) ಪು.ತಿ.ನ.- ಡಿ.ವಿ.ಜಿ.- ಕುವೆಂಪು-ದ.ರಾ. ಬೇಂದ್ರೆ

(D) ಕುವೆಂಪು- ದ.ರಾ. ಬೇಂದ್ರೆ- ಪು.ತಿ.ನ.-ಡಿ.ವಿ.ಜಿ.

50. (A) ರಾಕ್ಷಸ-ಕತೆಯಾದಳು ಹುಡುಗಿ-ಆಕಾಶ ಮತ್ತು ಬೆಕ್ಕು-ಮೃಗಯಾ

(B) ಆಕಾಶ ಮತ್ತು ಬೆಕ್ಕು-ಮೃಗಯಾ-ರಾಕ್ಷಸ-ಕತೆಯಾದಳು ಹುಡುಗಿ

(C) ಕತೆಯಾದಳು ಹುಡುಗಿ- ಮೃಗಯಾ-ರಾಕ್ಷಸ-ಆಕಾಶ ಮತ್ತು ಬೆಕ್ಕು

(D) ಮೃಗಯಾ-ಆಕಾಶ ಮತ್ತು ಬೆಕ್ಕು-ರಾಕ್ಷಸ-ಕತೆಯಾದಳು ಹುಡುಗಿ



Latest Sarkari Jobs, Govt Exam Results, Vacancies and updates on one click
Know More

prepp

# Latest Sarkari jobs, Govt Exam alerts, Results and Vacancies

- Latest News and Notification
- Exam Paper Analysis
- Topic-wise weightage
- Previous Year Papers with Answer Key
- Preparation Strategy & Subject-wise Books

To know more **Click Here**

www.prepp.in